Ex No. 11/2014

ಪಿ.ಡಬ್ಲ್ಯೂ-1

**ದಿಃ 09.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಡಿ ಹೆಚ್ ಆರ್ ನಂಬರ 1 (ಎ) ಮತ್ತು 1(ಸಿ) ಪರ ಶ್ರೀ ಪಿ ಪಿ ವಕೀಲರಿಂದಃ –**

ಗೌವಾನ್ವಿತ ಉಚ್ಚ ನ್ಯಾಯಾಲಯ ಧಾರವಾಡದಲ್ಲಿ ಸಿ ಪಿ ಸಿ ಆದೇಶ 22 ನಿಯಮ 4 ರ ಅಡಿಯಲ್ಲಿ ನೀವು ನಿಮ್ಮ ಸಹೋದರಿಯರು ನಿಮ್ಮ ತಾಯಿ ಓ ಎಸ್ ನಂಬರ 15/2013 ರ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿ ಕೋರಿ ಅರ್ಜಿ ಸಲ್ಲಿಸಿದ್ರಿ ಎಂದರೆ ಸರಿ. ಸದರಿ ಗೌವಾನ್ವಿತ ಉಚ್ಚ ನ್ಯಾಯಾಲಯವು ಈ ನ್ಯಾಯಾಲಯದಲ್ಲಿ ಓ ಎಸ್ ನಂಬರ 15/2013 ರ ದಾವೆಯಲ್ಲಿ ಅರ್ಜಿ ಸಲ್ಲಿಸಲು ನಿಮಗೆ ನಿರ್ದೇಶನ ಕೊಟ್ಟ ಮೇರೆಗೆ ನೀವು ಅರ್ಜಿಸಲ್ಲಿಸಿದ್ದೀರಿ ಎಂರದೆ ಸರಿ. ಸದರಿ ಅರ್ಜಿಯ ಮೇಲೆ ವಿಚಾರಣೆ ಆಗಿ ಆದೇಶ ಕೂಡ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ಗೌವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಡಬ್ಲ್ಯೂ ಪಿ ಸಂಖ್ಯೆ 100178/2020-21 ರ ಅರ್ಜಿಯಲ್ಲಿ ಸಲ್ಲಿಸಿದ ಮಧ್ಯಕಾಲಿಕ ಅರ್ಜಿಯ ಪ್ರತಿ ಸದರಿ ಡಬ್ಲ್ಯೂಪಿ ನಲ್ಲಿ ಗೌವಾನ್ವಿತ ಉಚ್ಚ ನ್ಯಾಯಾಲಯವು ಮಾಡಿದ ಆದೇಶದ ಪ್ರತಿ ಯನ್ನು ತೋರಿಸಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯ ಪ್ರತಿಗಳನ್ನು ನಿ ಆರ್ 1 ಎಂದು ಗುರುತಿಸಲಾಯಿತು. ನೀವು ಓ ಎಸ್ ನಂಬರ 15/2013 ರಲ್ಲಿ ಗೌವಾನ್ವಿತ ಉಚ್ಚ ನ್ಯಾಯಾಲಯದ ಆದೇಶಕ್ಕೆ ವಿರುದ್ಧ ವಾಗಿ ಮಧ್ಯಕಾಲಿಕ ಅರ್ಜಿ ನಂಬರ 20 ನ್ನು ಸಲ್ಲಿಸಿದ್ರಿ ಎಂದರೆ ಸರಿ. ಸದರಿ ಮಧ್ಯಕಾಲಿಕ ಅರ್ಜಿ ನಂಬರ 20 ರ ಮೇಲೆ ಅದೇ ನ್ಯಾಯಾಲಯವು ಆದೇಶ ಮಾಡಿರುತ್ತದೆ. ಸದರಿ ಅರ್ಜಿ ನಂಬರ 20 ಮತ್ತು ತಕರಾರು ಹಾಗೂ ಆದೇಶದ ಪ್ರತಿಗಳು ಇದೇನಾ ನೋಡಿ ಎಂದು ಕೇಳಿದಾಗ ಸಾಕ್ಷಿಯು ಸದರಿ ದಾಖಲೆಯ ಪ್ರತಿಗಳನ್ನು ನೋಡಿ ಹೌದು ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿಗೆ ತೋರಿಸಿದ ದಾಖಲೆಗಳನ್ನು ನಿ ಆರ್ 2 ಎಂದು ಗುರುತಿಸಲಾಯಿತು. ಆ ಸದರಿ ನಂಬರ 20 ನ್ನು ಮೃತ ನಾಗೇಂದ್ರಪ್ಪನವರು ನಮ್ಮ ಪರವಾಗಿ ವಿಲ್ ನಮೆ ಮತ್ತು ದಾನಪತ್ರವನ್ನು ಬರೆದಿರುತ್ತಾರೆಂದು ಹೇಳಿರುತ್ತೀರಾ ಎಂದರೆ ಸರಿ. ಈ ಅಮಲ್ದಾರಿ ಅರ್ಜಿಯಲ್ಲಿ ಬರಬೇಕಾದಂತಹ

Ex No. 11/2014

ಪಿ.ಡಬ್ಲ್ಯೂ-1

ಡಿಕ್ರಿ ಹಣವು ನಿಮಗೆ ಸೇರಬೇಕು ಎಂದು ಹೇಳುವ ಬಗ್ಗೆ ಏನಾದರು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲಾ ಎನ್ನುತ್ತಾರೆ. ಆದ್ದರಿಂದ ನೀವು ನಾಗೇಂದ್ರಪ್ಪ ನವರ ಕಾನೂನು ಬದ್ದ ವಾರಸುದಾರರು ಆಗಿಲ್ಲದೇ ಇದ್ದ ಕಾರಣ ಈ ಜಾರಿ ಅರ್ಜಿಯಲ್ಲಿ ಪಕ್ಷಗಾರರಾಗಿ ನೀವು ಸೇರಿಕೊಳ್ಳಲು ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸುಳ್ಳು. ನೀವು ಈ ಜಾರಿ ಅರ್ಜಿಯಲ್ಲಿ ಸೇರಿದ ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ಲಲಿತಮ್ಮ ಆಗಲಿ ಅಶೋಕ ಆಗಲಿ ಸಹಿ ಮಾಡಿ ಕೊಟ್ಟಿರುವುದಿಲ್ಲ ಎಂದರೆ ಸರಿ. ನೀವೇ ಸದರಿ ಲಲಿತಮ್ಮ ನಾಗೇಂದ್ರಪ್ಪನ ಹೆಂಡತಿ ಅಶೋಕ ನಾಗೇಂದ್ರಪ್ಪನ ಮಗ ಎಂದು ಹೇಳಿಕೊಂಡಿದ್ದೀರಾ ಎಂದರೆ ಸರಿ. ಆದುದರಿಂದ ಮೃತ ನಾಗೇಂದ್ರಪ್ಪನ ಈ ಜಾರಿ ಅರ್ಜಿಯಲ್ಲಿ ಬರಬೇಕಾದ ಡಿಕ್ರಿ ಹಣಕ್ಕೆ ವಾರಸುದಾರರಾದ ಲಲಿತಮ್ಮ ಮತ್ತು ಅಶೋಕ ರವರು ಪಡೆಯಲು ಅರ್ಹರಿದ್ದಾರೆ ಎಂದರೆ ಸುಳ್ಳು ಎನ್ನುತ್ತಾರೆ. ಅಶೋಕ ಮತ್ತು ಲಲಿತಮ್ಮ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನೀವು ಈ ಜಾರಿ ಪ್ರಕಾರಣದಲ್ಲಿ ಸುಳ್ಳು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.